# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1506 |
| ಸದಸ್ಯರ ಹೆಸರು | ಶ್ರೀ ಮಹಂತೇಶ ಮ. ಕವಟಗಿಮಠ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 24.09.2021 |

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ರಾಜ್ಯದ ಗ್ರಾಮೀಣ ಭಾಗಗಳ ರಸ್ತೆಗಳ ಸುಧಾರಣೆಗೆ ಘೋಷಿಸಲಾಗಿದ್ದ "ಗ್ರಾಮೀಣ ಸುಮಾರ್ಗ ಯೋಜನೆ"ಯು ಪ್ರಗತಿ ಕಾಣದಿರಲು ಕಾರಣಗಳೇನು; | ರೂ.7334.49 ಕೋಟಿಗಳ ಅನುದಾನದಲ್ಲಿ 20000 ಕಿ.ಮೀ ರಸ್ತೆ ಕಾಮಗಾರಿಗಳನ್ನು 5 ವರ್ಷಗಳ ಕಾಲಾವಧಿಯಲ್ಲಿ ಅಭಿವೃದ್ಧಿಪಡಿಸುವ **"ಗ್ರಾಮೀಣ ಸುಮಾರ್ಗ ಯೋಜನೆ"** ಜಾರಿಗೆ ತರುವ ಸಚಿವ ಸಂಪುಟದ ಟಿಪ್ಪಣಿಗೆ ಆರ್ಥಿಕ ಇಲಾಖೆಯ ಅನುಮೋದನೆಗಾಗಿ ದಿನಾಂಕ 11.08.2020 ರಂದು ಸಲ್ಲಿಸಲಾಗಿದ್ದು,<br><br>ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಹೊಸ ಯೋಜನೆ ಅನುಮೋದನೆಯಾಗಿರುವುದಿಲ್ಲ. |
| ಆ. | ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಹಂಚಿಕೆಯಾಗಿರುವ ಹಣವೆಷ್ಟು; | ಉದ್ಭವಿಸುವುದಿಲ್ಲ |
| ಇ. | ಈ ಯೋಜನೆಯ ಮುಂದುವರಿಕೆಗೆ ಆರ್ಥಿಕ ಲಭ್ಯತೆಯ ಕೊರತೆ ಕಾರಣವೆಂದು ವರದಿಯಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಆರ್ಥಿಕ ಇಲಾಖೆ ಒದಗಿಸುವ ಅನುದಾನದ ಲಭ್ಯತೆ ಮೇರೆಗೆ ಯೋಜನೆ ಕೈಗೊಳ್ಳಲು ಕ್ರಮ ವಹಿಸಬೇಕಿದೆ. |
| ಈ | ಈ ಯೋಜನೆಯಡಿ ರಾಜ್ಯದಲ್ಲಿ ಈವರೆಗೆ ಎಷ್ಟು ಕಿ.ಮೀ. ರಸ್ತೆ ಪ್ರಗತಿ ಗೊಂಡಿದೆ; | ಉದ್ಭವಿಸುವುದಿಲ್ಲ |
| ಉ | ಗ್ರಾಮೀಣ ಸುಮಾರ್ಗ ಯೋಜನೆಯಡಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಬಳಕೆಯಾದ ಅನುದಾನವೆಷ್ಟು; ಎಷ್ಟು ಕಿ.ಮೀ. ರಸ್ತೆ ಅಭಿವೃದ್ಧಿಗೊಂಡಿದೆ? | ಉದ್ಭವಿಸುವುದಿಲ್ಲ |

ಕಡತ ಸಂಖ್ಯೆ: ಗ್ರಾಅಪ:ಅಧಿ-15ವಿಸವಿಪ/43:ಆರ್‌ಆರ್‌ಸಿ:2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು